# ಶ್ರೀ ರಾಮಕೃಷ್ಣ ಗೃಹ ನಿರ್ಮಾಣ ಸಹಕಾರ ಸಂಘ ನಿ.,(ದಕ್ಷಿಣ)

"ತ್ರಿಶೂಲ್ ಟವರ್ಸ್" ನಂ.3, 4ನೇ ಮೇನ್ ರೋಡ್, ವಿ.ವಿ.ಮೊಹಲ್ಲಾ, ಮೈಸೂರು– 570 002

ಫೋನ್ ನಂ. 2411119, 2411130, 80737 51518

**ದಿನಾಂಕ:30-11-2024**

## ತಿಳುವಳಿಕೆ ಪತ್ರ

ಮಾನ್ಯಸದಸ್ಯರೇ:

ಕಛೇರಿ ವೇಳೆ: 10.30 ರಿಂದ 2.00
4.00 ರಿಂದ 6.30
ಭಾನುವಾರ ರಜೆ

**ವಿಷಯ:– 3ನೇ ಪ್ರಾಜೆಕ್ಟ್ ತಳೂರ್ ಹರ್ಬ್ಸ್ ಬಡಾವಣೆಯ ಅಭಿವೃದ್ಧಿಗೊಳಿಸುವ ಬಗ್ಗೆ.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 3ನೇ ಪ್ರಾಜೆಕ್ಟ್ ತಳೂರ್ ಹರ್ಬ್ಸ್ ಬಡಾವಣೆಯ ಅಭಿವೃದ್ಧಿಗೊಳಿಸುವ ಬಗ್ಗೆ ಈ ಹಿಂದೆ **2023-24**ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರೊಡನೆ ಚರ್ಚಿಸಿದಂತೆ ಈ ದಿನ ನಡೆದ ತಾ: 21-11-2024ರ ನಿರ್ದೇಶಕರ ಸಭೆಯಲ್ಲಿ ನೆರೆದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು ಈ ಬಡಾವಣೆಯ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ನಮ್ಮ ಸಂಘದ ಸ್ಕಿಲ್ ಟೆಕ್ ಗುತ್ತಿಗೆದಾರರನ್ನು ತಾ: **16-04-2024** ರಂದು ನಡೆದ **ವಿಶೇಷ ನಿರ್ದೇಶಕರ** ಸಭೆಯಲ್ಲಿ ಈ ಬಡಾವಣೆಯ ಸದಸ್ಯರಿಗೆ ನಿವೇಶನ ವಿತರಿಸಿ ಸುಮಾರು 14 ವರ್ಷ ಕಳೆದರೂ ಸಹ ಬಡಾವಣೆಯಲ್ಲಿ ಪೂರ್ಣ ಕಾಮಗಾರಿಯನ್ನು ಮುಗಿಸದೆ, ನಮ್ಮ ಸದಸ್ಯರಿಗೆ ಮತ್ತು ಸಂಘಕ್ಕೆ ತೊಂದರೆಯನ್ನೆ ನೀಡುತ್ತಿದ್ದು, ಅದಕ್ಕಾಗಿ ವಿಶೇಷ ನಿರ್ದೇಶಕರ ಸಭೆಯನ್ನು ಕರೆದು, ಹಿಂದಿನ ಎರಡು ಮಹಾಸಭೆಯಲ್ಲಿ ಸದಸ್ಯರು ತೆಗೆದುಕೊಂಡ ತೀರ್ಮಾನದಂತೆ ವಿಶೇಷ ನಿರ್ದೇಶಕರ ಸಭೆಯನ್ನು ನಡೆಸಿ, ಈ ಬಡಾವಣೆಯ ಕರಾರನ್ನು ಸಂಪೂರ್ಣವಾಗಿ ರದ್ದುಗೊಳಿಸಿ, ಅವರಿಂದ ಬರಬೇಕಾದ ಸ್ವಲ್ಪ ಮಟ್ಟದ ಹೆಚ್ಚಳ ಹಣಕ್ಕೆ ಶೇ.18% ಬಡ್ಡಿಯನ್ನು ವಿಧಿಸಿ ಗುತ್ತಿಗೆದಾರರ ಮೇಲೆ ನ್ಯಾಯಾಲಯದಲ್ಲಿ ಹಿರಿಯ ವಕೀಲರಾದ ಶ್ರೀ.ಓ. ಶ್ಯಾಂ ಭಟ್ ರವರಿಂದ ಕೇಸ್ ಅನ್ನು ದಾಖಲಿಸಲಾಗಿದೆ.

ಆದ್ದರಿಂದ ಈ ಹಿಂದೆ ನಡೆದ ಮಹಾಸಭೆಯಲ್ಲಿ ಚರ್ಚಿಸಿದಂತೆ ಅಧ್ಯಕ್ಷರು, ಈ ಬಡಾವಣೆಯನ್ನು ಅಭಿವೃದ್ಧಿಗೊಳಿಸಲು ಹಣದ ಅವಶ್ಯಕತೆ ಇರುವುದರಿಂದ ಈ ಬಡಾವಣೆಯ ಎಲ್ಲಾ ಸದಸ್ಯರನ್ನು ಬಡಾವಣೆಯಲ್ಲೆ ಸಭೆ ಸೇರಿಸಿ ಸದಸ್ಯರಲ್ಲಿ ಚರ್ಚಿಸಿ ಮುಂದಿನ ಬಡಾವಣೆ ಅಭಿವೃದ್ಧಿಗೊಳಿಸಲು ಸದಸ್ಯರಿಂದ ಅಭಿಪ್ರಾಯ ಪಡೆದು, ನಂತರ ಬಡಾವಣೆಯನ್ನು ಸಂಘದಿಂದಲೇ ಅಭಿವೃದ್ಧಿಗೊಳ್ಳಿಸುವುದಾಗಿ ಮಹಾಸಭೆಯಲ್ಲಿ ತಿಳಿಸಿದಂತೆ ಈ ದಿನ ನಡೆದ ತಾ: 21-11-2024 ರಂದು ನಡೆದ ನಿರ್ದೇಶಕರ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಉಪಾಧ್ಯಕ್ಷರು ಎಲ್ಲಾ

Shushila B.N.

Scanned with OKEN Scanner

ನಿರ್ದೇಶಕರುಗಳು ಈ ಬಡಾವಣೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಬಡಾವಣೆಯ ಎಲ್ಲಾ ಸದಸ್ಯರನ್ನು ಬಡಾವಣೆಯಲ್ಲೆ ಸಭೆಯನ್ನು ಕರೆದು, ಬಡಾವಣೆ ಅಭಿವೃದ್ಧಿಗೊಳಿಸಲು, ಬಡಾವಣೆಯಲ್ಲೆ ಸೇರಿದ ಸದಸ್ಯರುಗಳಲ್ಲಿ ಸಂಪೂರ್ಣವಾಗಿ ಚರ್ಚಿಸಿ ತೀರ್ಮಾನಕ್ಕೈಗೊಳ್ಳಬೇಕೆಂದು ಸಭೆಯಲ್ಲಿ ಸುರ್ದೀರ್ಘವಾಗಿ ಚರ್ಚಿಸಿ ತೀರ್ಮಾನಿಸಲಾಯಿತು. ಆದ್ದರಿಂದ ಈ ಬಡಾವಣೆಯ ಎಲ್ಲಾ ಸದಸ್ಯರುಗಳು ದಯಾಮಾಡಿ ತಾ: **29-12-2024** ರ ಭಾನುವಾರದಂದು ಬೆಳಿಗ್ಗೆ **10.00** ಗಂಟೆಗೆ ಸರಿಯಾಗಿ ಬಡಾವಣೆಯಲ್ಲಿ ಸಭೆ ನಡೆಸಲಾಗುವುದು, ಆದ್ದರಿಂದ ದಯಾಮಾಡಿ ಈ ಬಡಾವಣೆಯ ಎಲ್ಲಾ ಸದಸ್ಯರುಗಳು ಬಡಾವಣೆಯಲ್ಲಿ ನಡೆಯುವ ಸದಸ್ಯರುಗಳ ಸಭೆಗೆ ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿ ಬಡಾವಣೆಯನ್ನು ಅಭಿವೃದ್ಧಿಗೊಳಿಸಲು ಮಾರ್ಗ ಸೂಚಿಯನ್ನು ತಯಾರಿಸಿ ಬಡಾವಣೆಯಲ್ಲಿ ಸಂಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಿ, ಮಾನ್ಯ ಸದಸ್ಯರಿಗೆ ಮನೆ ಕಟ್ಟಲು ಯಾವ ತೊಂದರೆಯು ಆಗದಂತೆ ಬಡಾವಣೆಯಲ್ಲಿ ಉಳಿದ ಎಲ್ಲಾ ಕಾಮಗಾರಿಯನ್ನು ಪರಿಶೀಲಿಸಿ ಸದಸ್ಯರುಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಕ್ಕೈಗೊಂಡಲ್ಲಿ, ಸಂಘವು ಬಡಾವಣೆಯಲ್ಲಿ ಉಳಿದ ಕಾಮಗಾರಿ ನಡೆಸಲು ವಿವಿಧ ತುಂಡು- ಗುತ್ತಿಗೆದಾರರಿಂದ ಈಗಾಗಲೇ ಕೋಟೇಶ್‌ನ್ನು ಪಡೆದಿದ್ದು, ರಸ್ತೆ ಕಾಮಗಾರಿಗೆ ತಗಲುವ ವೆಚ್ಚ, ವಿದ್ಯುತ್ ಛಕ್ತಿಗೆ ತಗಲುವ ವೆಚ್ಚ, ಬಡಾವಣೆಯಲ್ಲಿ ಉಳಿದ ಕಾಂಪೌಂಡ್ ಕಾಮಗಾರಿಗೆ ತಗಲುವ ವೆಚ್ಚ, ಪಾರ್ಕ್ ಕಾಮಗಾರಿಯನ್ನು ಪೂರ್ಣಗೊಳಿಸುವ ವೆಚ್ಚ, ಮತ್ತು ಬಡಾವಣೆಯ ಮುಂಭಾಗಿಲಿನ ಆರ್ಚ್ ಕಾಮಗಾರಿಯನ್ನು ಪೂರ್ಣಗೊಳಿಸುವ ವೆಚ್ಚಗಾಗಿ, ಈಗಾಗಲೇ ತುಂಡು-ಗುತ್ತಿಗೆದಾರರಿಂದ ಕೋಟೇಶನ್ ಪಡೆದಿದ್ದು, ಇದರ ವೆಚ್ಚದ ಬಗ್ಗೆ ಬಡಾವಣೆಯಲ್ಲಿ ನಡೆಯುವ ಸಭೆಯಲ್ಲಿ ಸಂಘದಿಂದ ಪೂರ್ಣ ವಿವರಣೆಗಳನ್ನು ನೀಡಲಾಗುವುದು, ಈಗಾಗಲೇ ಸ್ಕಿಲ್ ಟೆಕ್ ಗುತ್ತಿಗೆದಾರರು ಬಡಾವಣೆಯಲ್ಲಿ ಎರಡು ನೀರಿನ ಟ್ಯಾಂಕ್‌ನ್ನು ಅರ್ಧದಷ್ಟು ಕಾಮಗಾರಿಯನ್ನು ನಡೆಸಿ ಸ್ಥಗಿತಗೊಳಿಸಿದ್ದು, ಅದನ್ನು ಸಂಘದಿಂದ ಬಡಾವಣೆಯಲ್ಲಿ ನೀರಿನ underground tank & Overhead tank ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, underground tank ಗೆ ನೀರಿನ ಪೈಪ್ ಅನ್ನು ಅಳವಡಿಸಿದ್ದು, underground tank ನಿಂದ Overhead tank ಗೆ ಅಳವಡಿಸಬೇಕಾಗಿದ್ದ ಆರು (6) ಲೈನ್ ಪೈಪ್ ಅನ್ನು ಅಳವಡಿಸಿದ್ದು, ಮತು ಮೇಲೆ ಏರಲು ಏಣಿಯನ್ನು ಅಳವಡಿಸಿದ್ದು, ಟ್ಯಾಂಕ್‌ನ ಮೇಲ್ಗಡೆ ಎರಡು ಸುತ್ತಿನ ಗ್ರೀಲ್ಸ್‌ನ್ನು ಅಳವಡಿಸಿದ್ದು, ಬಡಾವಣೆಗೆ Overhead tank ನಿಂದ ನೀರಿನ ಸಂಪರ್ಕವನ್ನು ಕಲ್ಪಿಸಲಾಗಿದೆ. ಮತ್ತು ಬಡಾವಣೆಯಲ್ಲಿ ಈಗಾಗಲೇ ಸಂಘದಿಂದ ಸಣ್ಣ-ಪುಟ್ಟ ಕಾಮಗಾರಿಯು ಸಂಘದಿಂದ ನಡೆಸಲಾಗಿದೆ. ಉಳಿಕೆ ಕಾಮಗಾರಿಯನ್ನು ನಡೆಸಬೇಕಾದರೆ ಹೆಚ್ಚಿನ ವೆಚ್ಚವಾಗಲಿದ್ದು, ಆದರಿಂದ ಮಾನ್ಯ ಸದಸ್ಯರುಗಳು ಬಡಾವಣೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಕ್ಕೈಗೊಳ್ಳಬೇಕೆಂದು, ಹಾಗೂ ತಮ್ಮ ತೀರ್ಮಾನದ ಮೇರೆಗೆ ಬಡಾವಣೆಯಲ್ಲಿ ಕಾಮಗಾರಿಯನ್ನು ಸಂಘದಿಂದ ಪೂರ್ಣಗೊಳಿಸಬಹುದೇಂದು ಈ ದಿನ ನಡೆದ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ತೀರ್ಮಾನಕ್ಕೈಗೊಂಡಿದ್ದು, ಆದ್ದರಿಂದ ಮಾನ್ಯ ಸದಸ್ಯರುಗಳು

Scanned with OKEN Scanner

ಬಡಾವಣೆಯಲ್ಲಿ ಪೂರ್ಣ ಕಾಮಗಾರಿಯನ್ನು ನಡೆಸಲು ವೆಚ್ಚವಾಗುವ ಹಣವನ್ನು ಪರಿಗಣಿಸಿ ಸಭೆಯಲ್ಲಿ ತಾವು ತೀರ್ಮಾನಕ್ಕೈಗೊಳ್ಳಬೇಕೆಂದು ತಮ್ಮಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು ಮನವಿ ಮಾಡಿಕೊಳ್ಳುತ್ತೀದ್ದೆವೆ.

ಬಡಾವಣೆಯ ಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಲು ಬಡಾವಣೆಯ ಎಲ್ಲಾ ಸದಸ್ಯರುಗಳು ಸಂಪೂರ್ಣ ಬೆಂಬಲ ನೀಡಬೇಕೆಂದು ಸಭೆಯಲ್ಲಿ ಚರ್ಚಿಸಿ ತೀರ್ಮಾನಕ್ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರಲ್ಲಿ ಸಂಘದಿಂದ ವಿನಂತಿಸಿಕೊಳ್ಳಲಾಗಿದೆ.

## ವಿಶೇಷ ಸೂಚನೆ:-

ಈ ಸಭೆಗೆ ತಪ್ಪದೇ ಹಾಜರಾಗಬೇಕೆಂದು ಸಂಘವು ತಿಳಿಸುತ್ತಾ, ತಾವುಗಳು ಈ ಸಭೆಗೆ ಹಾಜರಾತಿಯ ಬಗ್ಗೆ ಸದಸ್ಯರುಗಳು ಡಿಸೆಂಬರ್ 25ನೇ ತಾರೀಖಿನ ಒಳಗಾಗಿ ತಪ್ಪದೇ ದೂರವಾಣಿ ಮೂಲಕ ತಮ ಹೆಸರನ್ನು ನೋಂದಣಿ ಮಾಡಿಕೊಳ್ಳಬೇಕೆಂದು ತಮಲ್ಲಿ ವಿನಂತಿಸಿಕೊಳ್ಳುತ್ತೇವೆ. ಬಡಾವಣೆಯಲ್ಲೆ ಬೆಳಿಗ್ಗೆ **10.00** ಗಂಟೆಗೆ ಸಭೆ ನಡೆಯುತ್ತೀರುವುದರಿಂದ ಮಾನ್ಯ ಸದಸ್ಯರುಗಳಿಗೆ ಬಡಾವಣೆಯಲ್ಲಿ ತಮಗೆ ಕಾಫಿ,ಟೀ, ಬಿಸ್ಕತ್ ಅನ್ನು ಏಪರ್ಡಿಸಬೇಕಾಗಿರುವುದರಿಂದ ಮತ್ತು ತಮಗೆ ಕುಡಿಯಲು ಬೇಕಾಗುವ ನೀರಿನ ಸೌಕರ್ಯವನ್ನು ಕಲ್ಪಿಸಲು ಮತ್ತು ಮಾನ್ಯ ಸದಸ್ಯರಿಗೆ ಮಧ್ಯಾಹ್ನದ ಊಟದ ಏರ್ಪಾಡು ಮಾಡಲು ಸದಸ್ಯರ ಸಂಖ್ಯೆಯನ್ನು ಆಧರಿಸಿ ಸಂಘದಿಂದ ಏರ್ಪಡಿಸಲಾಗುವುದು, ದಯಾಮಾಡಿ ತಪ್ಪದೆ ಡಿಸೆಂಬರ್ 25ನೇ ತಾರೀಖಿನ ಒಳಗಾಗಿ ಸಭೆಗೆ ಬರುವ ಹಾಜರಾತಿಯನ್ನು ತಪ್ಪದೆ, ಈ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕೆಂದು ತಮಲ್ಲಿ ವಿನಂತಿಸಿಕೊಳ್ಳುತ್ತೇವೆ. ದೂರವಾಣಿ ಸಂಖ್ಯೆ:- **0821-2411119, 80737 51518** ತಪ್ಪದೇ ಈ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಹಾಜರಾತಿಯನ್ನು ಕಾಯಂ ಗೊಳಿಸಿಕೊಳ್ಳಬೇಕೆಂದು ತಮಲ್ಲಿ ವಿನಂತಿಸಿಕೊಳ್ಳುತ್ತೇವೆ. ಬಡಾವಣೆಯಲ್ಲೆ ಶಾಮಿಯಾನವನ್ನು ಅಳವಡಿಸಿ ಸದಸ್ಯರ ಸಭೆಯನ್ನು ನಡೆಸಲಾಗುವುದು.

ಈ ಹಿಂದೆ ನಮ್ಮ ಸಂಘದ ಸ್ಕಿಲ್ ಟೆಕ್ ಗುತ್ತಿಗೆದಾರರು ಬಡಾವಣೆ ಅಭಿವೃದ್ಧಿಗೊಳ್ಳಿಸಲು, ಬಡಾವಣೆ ಸಾಮಗ್ರಿಗಳ ಧರ ಹೆಚ್ಚಳದ ಬಗ್ಗೆ ತಾ:**12-06-2018** ರಂದು ಸಂಘಕ್ಕೆ ಪತ್ರ ಬರೆದಿದ್ದು, ಆದರೆ ಸಂಘವು ಗುತ್ತಿಗೆದಾರರಿಗೆ ಧರ ಹೆಚ್ಚಳ ಮಾಡಿಕೊಡಲು ಸಾಧ್ಯವಿಲ್ಲ ಎಂದು ಮತ್ತು ಈಗಾಗಲೇ ನಮ್ಮ ಸದಸ್ಯರಿಗೆ ಒಂದು ಚದರ/ಅಡಿಗೆ ರೂ.50/-ಗಳನ್ನು ಹೆಚ್ಚಳ ಮಾಡಿದ್ದು, ಆ 50/-ಗಳಿಗೆ ಸಂಘದಿಂದ ಮೂಲೆ ನಿವೇಶನದಿಂದ ಬರುವ ಹೆಚ್ಚಳ ಹಣದಿಂದ ರೂ.25/-ಗಳನ್ನು ನೀಡುವುದಾಗಿ ತಿಳಿಸಿದ್ದು, ಅದರಂತೆ ಮುಂದುವರೆದ ಕರಾರು ನಡೆದಿದ್ದು, ಈಗಾಗಲೇ ಹಲವಾರು ಸದಸ್ಯರಿಗೆ ನಿವೇಶನ ನೋಂದಣಿಯಾಗಿದ್ದು, ಆದ್ದರಿಂದ ಈ ಸಮಯದಲ್ಲಿ ಸದಸ್ಯರಿಂದ ಹೆಚ್ಚಳ ಹಣವನ್ನು ಕೇಳಲು ಸಾಧ್ಯವಿಲ್ಲ ಎಂದು ನಿರ್ದೇಶಕರ ಸಭೆಯಲ್ಲಿ ಗುತ್ತಿಗೆದಾರರಿಗೆ ತಿಳಿಸಿದ್ದು, ಆದರೆ ಗುತ್ತಿಗೆದಾರರು ಒಂದು ಚದರ/ಅಡಿಗೆ ರೂ.60/-ಗಳನ್ನು ಹೆಚ್ಚಳ ಮಾಡಿಕೊಡಲೇ

Shubha B.

Scanned with OKEN Scanner

ಬೇಕೆಂದು ನಿರ್ದೇಶಕರ ಸಭೆಯಲ್ಲಿ ತಿಳಿಸಿದ್ದು, ಆ ದಿನದ ಸಭೆಯಲ್ಲೇ ಗುತ್ತಿಗೆದಾರರಿಗೆ ನಿವೇಶನದ ಧರವನ್ನು ಹೆಚ್ಚಳ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದು, ನಂತರ ಗುತ್ತಿಗೆದಾರರು ಬಡಾವಣೆಯಲ್ಲಿ ಕಾಮಗಾರಿಯನ್ನು ನಡೆಸದೆ ಇರುವುದರಿಂದ ಗುತ್ತಿಗೆದಾರರಿಗೆ ಹಲವಾರು ಪತ್ರಗಳನ್ನು ಬರೆದು, ಹಲವಾರು ನಿರ್ದೇಶಕರ ಸಭೆಯಲ್ಲಿ ಗುತ್ತಿಗೆದಾರರಿಗೆ ಸಂಘದಿಂದ ಹಣವನ್ನು ಪಡೆದು, ಕಾಮಗಾರಿಯನ್ನು ನಡೆಸದೆ ಇರುವುದರ ಬಗ್ಗೆ ಚರ್ಚೆ ನಡೆಸಿ ಕಾಮಗಾರಿಯನ್ನು ತಕ್ಷಣವೇ ನಡೆಸುವಂತೆ ತಿಳಿಸಿದ್ದು, ಆದರೆ ಗುತ್ತಿಗೆದಾರರು ಬಡಾವಣೆಯಲ್ಲಿ ಕಾಮಗಾರಿಯನ್ನು ನಡೆಸದೆ ಇರುವುದರಿಂದ ಈ ಹಿಂದಿನ ಎರಡು ಮಹಾಸಭೆಯಲ್ಲಿ ಸದಸ್ಯರು ತೆಗೆದುಕೊಂಡ ತೀರ್ಮಾನದಂತೆ **ತಾ: 16-04-2024** ರಂದು ನಡದೆ **"ವಿಶೇಷ ನಿರ್ದೇಶಕರ ಸಭೆಯಲ್ಲಿ"** ಗುತ್ತಿಗೆದಾರರ ಕರಾರನ್ನು ರದ್ದುಗೊಳಿಸಿ ಮುಂದಿನ ಬಡಾವಣೆಯ ಕಾಮಗಾರಿಯನ್ನು ಸಂಘದಿಂದಲೇ ನಡೆಸಲು ಆ ಸಭೆಯಲ್ಲಿ ತೀರ್ಮಾನಿಸಿದ್ದು, ಆ ಸಭೆಯ ತೀರ್ಮಾನದಂತೆ ಬಡಾವಣೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಬಡಾವಣೆ ಕಾಮಗಾರಿಗಾಗಿ ಹಣದ ಅವಶ್ಯಕತೆ ಇರುವುದರಿಂದ ಈ ಸಭೆಯನ್ನು ಕರೆದು ಸದಸ್ಯರಲ್ಲಿ ತೀರ್ಮಾನ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಆಡಳಿತ ಮಂಡಾಳಿ ಅಪ್ಪಣೆ ಮೇರೆಗೆ

ಶ್ರೀ ರಾಮಕೃಷ್ಣ, ಗೃಹ ನಿರ್ಮಾಣ ಸಹಕಾರ
ಸಂಘ ನಿ., (ಪಟ್ಟಣ)
.13.
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**Talur Urbs Layout Location**

Dear Members,

Regarding the Layout development in 3rd Project "TALUR URBS" Meeting held on Dated: 29-12-2024, @ 10.30 a.m. Kindly attend all Members.

Scanned with OKEN Scanner